# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜೂನ್ 11, 2022

ಸಂಪುಟ : 49 ಸಂಚಿಕೆ : 28 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ರಾಜ್ಯಸಭೆ : ಬಿಜೆಪಿಗೆ 3, ಕಾಂಗ್ರೆಸ್‌ಗೆ 1

### ಕಾಂಗ್ರೆಸ್ - ಜೆಡಿಎಸ್ ಮೈತ್ರಿಯಾಗದೇ ಬಿಜೆಪಿಗೆ ಒಂದು ಸ್ಥಾನದ ಬೋನಸ್

ಬೆಂಗಳೂರು, ಜೂ. 10 – ತೀವ್ರ ಪೈಪೋಟಿಯಲ್ಲಿ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ನಗೆ ಬೀರಿದ್ದು, ತಾನು ಸ್ಪರ್ಧಿಸಿದ್ದ ಎಲ್ಲಾ ಮೂರು ಸ್ಥಾನಗಳಲ್ಲೂ ಗೆಲುವು ಕಂಡಿದೆ.

ಕಾಂಗ್ರೆಸ್ ಪಕ್ಷ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿ ಒಂದರಲ್ಲಿ ಗೆದ್ದಿದ್ದರೆ, ಜೆಡಿಎಸ್ ತಾನು ಸ್ಪರ್ಧಿಸಿದ್ದ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿಲ್ಲ.

ಬಿಜೆಪಿಯಿಂದ ಕಣಕ್ಕಳಿದಿದ್ದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ನಟ – ರಾಜಕಾರಣಿ ಜಗ್ಗೇಶ್ ಹಾಗೂ ಲೆಹರ್ ಸಿಂಗ್ ಅವರು ಗೆಲುವು ಕಂಡಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಕೇಂದ್ರ ಸಚಿವ ಜೈರಾಮ್ ರಮೇಶ್ ವಿಜೇತರಾಗಿದ್ದಾರೆ. ಸೀತಾರಾಮನ್ ಹಾಗೂ ರಮೇಶ್ ಅವರು ಕರ್ನಾಟಕ ದಿಂದ ಸತತ ಎರಡನೇ ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ಮೂವರ (3ನೇ ಪುಟಕ್ಕೆ)



## ಭತ್ತ ಕಟಾವು : ನಿರ್ದಿಷ್ಟ ದರ ಪಡೆಯಲು ಡಿಸಿ ಕರೆ

ದಾವಣಗೆರೆ, ಜೂ. 10- ಜಿಲ್ಲೆಯಲ್ಲಿ ಬೇಸಿಗೆ ಹಂಗಾಮಿನಲ್ಲಿ 54695 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆಯ ಕ್ಷೇತ್ರ ಆವರಿಸಿದ್ದು, ಸದ್ಯ ಭತ್ತದ ಬೆಳೆಯು ಕಟಾವಿನ ಹಂತ ತಲುಪಿರುತ್ತದೆ ಹಾಗೂ ಜಿಲ್ಲೆಯಲ್ಲಿ ಭತ್ತದ ಕಟಾವು ಪ್ರಾರಂಭವಾಗಿದೆ. ಜಿಲ್ಲೆಯ ಬಹುತೇಕ ರೈತರು ಭತ್ತದ ಬೆಳೆಯನ್ನು ಕಟಾವು ಯಂತ್ರಗಳ ಮೂಲಕ ಕಟಾವು ಮಾಡುತ್ತಿದ್ದು, ರೈತರು ತಮ್ಮ ಸಮೀಪದ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಲಭ್ಯವಿರುವ ಭತ್ತ ಕಟಾವು ಯಂತ್ರಗಳ ಪ್ರಯೋಜನ ಪಡೆಯಬಹುದು.

ಖಾಸಗಿ ಭತ್ತ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಅತಿಹೆಚ್ಚು ಬಾಡಿಗೆ ಹಣ ನಿಗದಿಪಡಿಸುತ್ತಿರುವುದು ಗಮನಕ್ಕೆ ಬಂದಿದ್ದು, ಇದರಿಂದ ರೈತರಿಗೆ ಹೆಚ್ಚಿನ ಆರ್ಥಿಕ (4ನೇ ಪುಟಕ್ಕೆ)

## ಮಾಸ್ಕ್ ಧರಿಸುವುದು ಕಡ್ಡಾಯ

### ಕೊರೊನಾ ಹೆಚ್ಚಳದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆದೇಶ



ಬೆಂಗಳೂರು, ಜೂ. 10 – ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕಳೆದ ಹತ್ತು ದಿನಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿವೆ. ಗುರುವಾರದಂದು ರಾಜ್ಯದಲ್ಲಿ 471 ಪ್ರಕರಣಗಳು ಪತ್ತೆಯಾಗಿದ್ದು, ಪಾಸಿಟಿವ್ ಪ್ರಮಾಣ ಶೇ.2.14ಕ್ಕೆ ತಲುಪಿದೆ. ಈ ಹಿನ್ನೆಲೆಯಲ್ಲಿ ಮಾಸ್ಕ್ ಕಡ್ಡಾಯಗೊಳಿಸಲಾಗಿದೆ. ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ. ರಣದೀಪ್ ಆದೇಶ ಹೊರಡಿಸಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸಲಾಗಿದೆ. ಈ ಕ್ರಮವನ್ನು ಜಾರಿಗೊಳಿಸಲು ಪೊಲೀಸ್ ಸಿಬ್ಬಂದಿ ನೆರವಾಗಲಿದ್ದಾರೆ ಎಂದು ತಿಳಿಸಿದ್ದಾರೆ.

ಶಾಪಿಂಗ್ ಮಾಲ್, ರೆಸ್ಟೋರೆಂಟ್, ಪಬ್, ಹೋಟೆಲ್, ಶೈಕ್ಷಣಿಕ ಸಂಸ್ಥೆ, ಹಾಸ್ಟೆಲ್, ಕಚೇರಿ, ಕಾರ್ಖಾನೆ ಇತ್ಯಾದಿ ಪ್ರದೇಶಗಳಲ್ಲಿ ಸಿಬ್ಬಂದಿ ಮಾಸ್ಕ್ ಧರಿಸುವುದು ಕಡ್ಡಾಯ. ಮಾಸ್ಕ್ ಧರಿಸಿ ಬರುವವರಿಗೆ ಮಾತ್ರ ಪ್ರವೇಶ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸ್ವಂತ ವಾಹನ, ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ.

## ಕಂಪನಿ ಮುಚ್ಚಲು ಖಾಸಗೀಕರಣ ಮಾಡುತ್ತಿಲ್ಲ

ದಾವಣಗೆರೆ, ಜೂ. 10– ಯಾವುದೇ ಘಟಕ, ಇಲ್ಲವೇ ಕಂಪನಿಯನ್ನು ಮುಚ್ಚುವ ಸಲುವಾಗಿ ಸರ್ಕಾರ ಬಂಡವಾಳ ಹಿಂತೆಗೆತ ಯೋಜನೆ ರೂಪಿಸಿಲ್ಲ. ಈ ಸಂಸ್ಥೆಗಳನ್ನು ಹೆಚ್ಚು ದಕ್ಷ ಹಾಗೂ ವೃತ್ತಿಪರ ಮಾಡಲು ಬಂಡವಾಳ ಹಿಂತೆಗೆತ ಮಾಡಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ತುಂಬಿದ ಸಂದರ್ಭದಲ್ಲಿ ಹೂಡಿಕೆ ಹಾಗೂ ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆ (ದೀಪಂ) ವತಿಯಿಂದ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್‌ನಲ್ಲಿ ಆಯೋಜಿಸಲಾಗಿದ್ದ 'ಮಾರುಕಟ್ಟೆಗಳ ಮೂಲಕ ಸಂಪತ್ತಿನ ಸೃಷ್ಟಿ' ವಿಷಯ ಕುರಿತ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

ಈ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ದಾವಣಗೆರೆ ಸೇರಿದಂತೆ 75 ನಗರಗಳಲ್ಲಿ ನೇರ ಪ್ರಸಾರ ಮಾಡಲಾಯಿತು. ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನೇರ ಪ್ರಸಾರ ಕಾರ್ಯಕ್ರಮಕ್ಕೆ ವ್ಯವಸ್ಥೆ ಮಾಡಲಾಗಿತ್ತು.



**ದಕ್ಷತೆ, ವೃತ್ತಿಪರತೆ ತರುವ ಮೂಲಕ ಉತ್ಪಾದಕತೆ ಹೆಚ್ಚಿಸಿ, ಆರ್ಥಿಕತೆ ಅಭಿವೃದ್ಧಿ ತರಲು ಬಂಡವಾಳ ಹಿಂತೆಗೆತ**

1999ರ ನಂತರ ಖಾಸಗೀಕರಣಕ್ಕೆ ಒಳಗಾದ ಸಾರ್ವಜನಿಕ ವಲಯದ ಉದ್ಯಮಗಳನ್ನು ಈಗ ವೃತ್ತಿಪರರು ನಡೆಸುತ್ತಿದ್ದಾರೆ. ಈ ಕಂಪನಿಗಳ ಕಾರ್ಯ ನಿರ್ವಹಣೆ ಉತ್ತಮವಾಗಿದೆ ಹಾಗೂ ಲಾಭ ಸಹ ಹೆಚ್ಚಾಗಿದೆ. ಈ (3ನೇ ಪುಟಕ್ಕೆ)

### ಅಣು ವಲಯದಲ್ಲೂ ಖಾಸಗಿಗೆ ಅವಕಾಶ

"ಫೆಬ್ರವರಿ 2021ರ ನಂತರ ಸಾರ್ವಜನಿಕ ವಲಯದ ಕಂಪನಿಗಳ ಕಾರ್ಯನಿರ್ವಹಣೆ ಬದಲಾಗಿದೆ. 4 ವ್ಯೂಹಾತ್ಮಕ ವಲಯಗಳನ್ನು ಹೊರತುಪಡಿಸಿ ಉಳಿದ ಎಲ್ಲೆಡೆ ಖಾಸಗಿ ಹೂಡಿಕೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ವ್ಯೂಹಾತ್ಮಕ ಅಣು ಉದ್ಯಮ ವಲಯವೂ ಮುಕ್ತವಾಗಿದೆ. ನಾಗರಿಕ ಉದ್ದೇಶಕ್ಕೆ ಬಳಕೆಯಾಗುವ ಸಣ್ಣ ರಿಯಾಕ್ಟರ್‌ಗಳಲ್ಲೂ ಖಾಸಗಿ ಹೂಡಿಕೆಗೆ ಪರಿಗಣಿಸಲಾಗುತ್ತಿದೆ ಎಂದವರು ತಿಳಿಸಿದರು.


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಉಸಿರು ಹೋದರೂ ಹೆಸರು ಉಳಿಸಿದ
**ದಿ|| ಶ್ರೀ ಗುಮ್ಮಾನಾಯ್ಕ**
ನಿವೃತ್ತ ಕೃಷಿ ಅಧಿಕಾರಿಗಳು
ನಿಧನ : 25.05.2018

ನೀವು ನಮ್ಮನ್ನಗಲಿ ನಾಲ್ಕು ವರ್ಷಗಳಾದವು.
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ.
ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ:
ಧರ್ಮಪತ್ನಿ : ಶ್ರೀಮತಿ ರುದ್ರಮ್ಮ ಗುಮ್ಮಾನಾಯ್ಕ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗ

## ಶ್ರೀಮತಿ ರತ್ನಮ್ಮ ನಿಧನ



ದಾವಣಗೆರೆ ದುಗ್ಗಮ್ಮನಪೇಟೆ ನಾಲ್‌ಬಂದ್ ಬೀದಿ ವಾಸಿ ಕುರುಬ ಸಮಾಜದ ಮುಖಂಡರು, ಕನಕ ಬ್ಯಾಂಕ್ ನಿರ್ದೇಶಕರಾದ ಪಿ. ಚೌಡಪ್ಪ ಇವರ ಧರ್ಮಪತ್ನಿ ಹಾಗೂ 5ನೇ ವಾರ್ಡ್ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸುಧಾ ಮಂಜುನಾಥ್ ಇಟ್ಟಿಗುಡಿ ಇವರ ತಾಯಿ
**ಶ್ರೀಮತಿ ರತ್ನಮ್ಮ**
ಇವರು ದಿನಾಂಕ 10.06.2022ರ ಶುಕ್ರವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.06.2022ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗದವರು
99457 05539, 91646 38280


## ಪಿ.ಜಿ. 1,456 ಸೀಟುಗಳ ಮರು ಕೌನ್ಸಿಲಿಂಗ್‌ಗೆ ಸುಪ್ರೀಂ ನಕಾರ

ನವದೆಹಲಿ, ಜೂ. 10 – ಆಲ್ ಇಂಡಿಯಾ ಕೋಟಾದ ನೀಟ್ - ಪಿಜಿ - 2021ರ ಖಾಲಿ ಉಳಿದ 1,456 ಸೀಟುಗಳಿಗೆ ಮತ್ತೊಂದು ಸುತ್ತಿನ ಕೌನ್ಸಿಲಿಂಗ್ ನಡೆಸದಿರಲು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡಿರುವುದನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಸರ್ಕಾರದ ನಿರ್ಧಾರ ನಿರಂಕುಶವಾಗಿದೆ ಎಂದು ದಾಖಲಾಗಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಹಾಗೂ ಅನಿರುದ್ಧ ಬೋಸ್ ಅವರನ್ನು ಒಳಗೊಂಡ ಪೀಠ ತಳ್ಳಿಹಾಕಿದೆ.

ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುವ ವೈದ್ಯಕೀಯ ಶಿಕ್ಷಣದ ಗುಣಮಟ್ಟದಲ್ಲಿ ಯಾವುದೇ ಹೊಂದಾಣಿಕೆ (4ನೇ ಪುಟಕ್ಕೆ)

## ಶಿಶು ಮಾರಾಟ ಪ್ರಕರಣ ಮಗು ಪತ್ತೆ : ಬಂಧನ

ದಾವಣಗೆರೆ, ಜೂ.10- ನವಜಾತ ಶಿಶುವನ್ನು ಮಾರಾಟ ಮಾಡಿದ್ದ ಪ್ರಕರಣವನ್ನು 24 ಗಂಟೆಯಲ್ಲೇ ಬೇಧಿಸಿರುವ ಪೊಲೀಸರು ಮಗುವನ್ನು ಪತ್ತೆ ಮಾಡಿದ್ದಲ್ಲದೇ, ಮಧ್ಯವರ್ತಿಯಾಗಿದ್ದ ಓರ್ವನನ್ನು ವಶಕ್ಕೆ ಪಡೆದಿದ್ದಾರೆ.

ನಾಗಮ್ಮ ಕೇಶವಮೂರ್ತಿ ಬಡಾವಣೆಯ ಬಸಪ್ಪ ಎಂಬ ವೃದ್ಧ ತನ್ನ ಮಗಳ 2ನೇ ಗಂಡು ಮಗುವನ್ನು 60 ಸಾವಿರ ರೂ.ಗೆ ಮಾರಾಟ ಮಾಡಿದ್ದರು. ಈ ಮಗುವನ್ನು ಮಾರಾಟ ಮಾಡಲು ಏಗ್‌ರೈಸ್ ಪರಶುರಾಮ ಮಧ್ಯವರ್ತಿಯಾಗಿ ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿಯ ನವಲೆ ಗ್ರಾಮದ ಭೀಮವ್ವ, ಹಾಲಪ್ಪ ಎಂಬ ದಂಪತಿಗೆ ಮಾರಾಟ ಮಾಡಿಸಿದ್ದನು. ಹಸುಗೂಸು ಮಾರಾಟ (4ನೇ ಪುಟಕ್ಕೆ)


## ಬೆಳ್ಳುಳ್ಳಿ ಲೀಲಾವತಿ ನಿಧನ



ಎಂಸಿಸಿ 'ಬಿ' ಬ್ಲಾಕ್ 3 ನೇ ಮೇನ್ 3ನೇ ಕ್ರಾಸ್ ವಾಸಿ ಶ್ರೀ ಬೆಳ್ಳುಳ್ಳಿ ಸದಾನಂದ ಅವರ ಧರ್ಮಪತ್ನಿ
**ಶ್ರೀಮತಿ ಬೆಳ್ಳುಳ್ಳಿ ಲೀಲಾವತಿ**
ಅವರು ದಿನಾಂಕ : 10.6.2022ರ ಶುಕ್ರವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ : 11.6.2022ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಗಾಂಧಿನಗರ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ:
**ಬೆಳ್ಳುಳ್ಳಿ ಸದಾನಂದ ಮತ್ತು ಕುಟುಂಬ ವರ್ಗದವರು**
ಮೊ: 97318 24834, 70199 81979

## ಮೆಡಿ ಹೌಸ್




**ನೂತನ ಶಾಖೆ ಅದ್ದೂರಿ ಪ್ರಾರಂಭ**

10ನೇ ಶಾಖೆ ದಾವಣಗೆರೆಯಲ್ಲಿ, 15ನೇ ಶಾಖೆ ಕರ್ನಾಟಕದಲ್ಲಿ

ಈ ಸಂದರ್ಭದಲ್ಲಿ ನಮ್ಮ ಎಲ್ಲಾ ಗ್ರಾಹಕರು, ಹಿತೈಷಿಗಳು, ಸಿಬ್ಬಂದಿ ವರ್ಗ ಮತ್ತು ಕುಟುಂಬದವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು

ದಿನಾಂಕ: 12.06.2022 ಭಾನುವಾರ
ಸಮಯ: ಬೆಳಗ್ಗೆ 11.30ಕ್ಕೆ

ನೂತನ ಶಾಖೆಯ ಸ್ಥಳ:
# 1343/9ಬಿ, ಬಾಲಾಜಿ ಪ್ಲಾಜಾ, ಸ್ಟೇಡಿಯಂ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577004. ಮೊ: 90361 39120



## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಜೀವನ್ ಭೀಮಾನಗರ, ಚಿಕ್ಕಮಣಿ ದೇವರಾಜ ಅರಸು ಬಡಾವಣೆ, ಜಯನಗರ ಎ ಮತ್ತು ಬಿ ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಸಾಯಿಬಾಬಾ ದೇವಸ್ಥಾನದ ಸುತ್ತಮುತ್ತ, ಲಕ್ಷ್ಮಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ದೂರದರ್ಶನ ಕೇಂದ್ರ, ಮಹಾನಗರ ಪಾಲಿಕೆ ನೀರು ಸರಬರಾಜು ಘಟಕಗಳು, ಸರ್ಕ್ಯೂಟ್ ಹೌಸ್, ಭೂ ಸೇನಾ ನಿಗಮ, ಜಿಲ್ಲಾ ಪಂಚಾಯತ್ ಕಛೇರಿ, ಇಂಡಸ್ಟ್ರಿಯಲ್ ಏರಿಯ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯನಗರ, ಎಸ್.ಎ.ರವೀಂದ್ರನಾಥ ಬಡಾವಣೆ ಮತ್ತು ಸುತ್ತ ಮುತ್ತ ಪ್ರದೇಶಗಳು.

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ, ತರಳಬಾಳು ಬಡಾವಣೆ, ಯುಬಿಡಿಟಿ ಲೇಡಿಸ್ ಹಾಸ್ಟೆಲ್, ಜಮುನಾ ವಾಣಿಜ್ಯ ಮಳಿಗೆ, ಸವಿತಾ ಹೋಟೆಲ್, ವಿದ್ಯಾನಗರ, ತರಳಬಾಳು ಬಡಾವಣೆ ಗಾಂಧಿ ಮೂರ್ತಿ ವೃತ್ತದಿಂದ ಈಶ್ವರ ಪಾರ್ವತಿ ದೇವಸ್ಥಾನ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ ಭೀಮ ನಗರ, ಕರ್ನಾಟಕ ಬೀಜ ನಿಗಮ, ಸ್ವಾಮಿ ವಿವೇಕಾನಂದ ಬಡಾವಣೆ, ಎಲ್.ಐ.ಸಿ ಕಾಲೋನಿ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆ, ಪಿಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿ.ಎಸ್.ಎನ್.ಎಲ್ ಕಛೇರಿ, ಶಂಕರ್ ವಿಹಾರ್ ಬಡಾವಣೆ, ಶಾಂತಿನಗರ ಮತ್ತು ವಿನಾಯಕ ನಗರ, ಡಿ.ಸಿ ಆಫೀಸ್, ಕರೂರು ಇಂಡಸ್ಟ್ರಿಯಲ್ ಏರಿಯ ಮತ್ತು ಸುತ್ತ ಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಬಿಜೆಪಿ ಯುವ ಮೋರ್ಚಾದಿಂದ ವಿಕಾಸ ತೀರ್ಥ ಬೈಕ್ ರ್‍ಯಾಲಿ



ದಾವಣಗೆರೆ, ಜೂ. 10 - ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದು 8 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ವತಿಯಿಂದ ನಗರದಲ್ಲಿ ಇಂದು ವಿಕಾಸ ತೀರ್ಥ ಬೈಕ್ ರ್‍ಯಾಲಿ ನಡೆಸಲಾಯಿತು.

ಬಿಜೆಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷ ಡಾ. ಸಂದೀಪ್ ಕುಮಾರ್ ಚಾಲನೆ ನೀಡಿದರು. ಬಂಬೂಬಜಾರ್ ಗಣೇಶ್ ಹೋಟೆಲ್ ಸರ್ಕಲ್‌ನಿಂದ ಆರಂಭಗೊಂಡ ಬೈಕ್ ರ್‍ಯಾಲಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ನಂತರ ಕಾರ್ಯಕಾರಿಣಿ ಸಭೆ ನಡೆದ ದಾವಣಗೆರೆ-ಹರಿಹರ ಸಹಕಾರ ಬ್ಯಾಂಕ್ ಸಮುದಾಯ ಭವನದ ಮುಂಭಾಗದಲ್ಲಿ ಮುಕ್ತಾಯಗೊಂಡಿತು.

ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಮಾಜಿ ಮೇಯರ್ ಎಸ್.ಟಿ. ವೀರೇಶ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

## ಇಂದು ಪಠ್ಯ ಪುಸ್ತಕ ಪರಿಷ್ಕರಣೆ ಸತ್ಯ-ಮಿಥ್ಯ ಕುರಿತ ವಿಚಾರ ಸಂಕಿರಣ

ದಾವಣಗೆರೆ, ಜೂ.10- ವರ್ತಮಾನ ಫೋರಂ ಫಾರ್ ಇಂಟಲೆಕ್ಚುಯಲ್ ಡಿಬೇಟ್ಸ್ ವತಿಯಿಂದ ಪಠ್ಯ ಪುಸ್ತಕ ಪರಿಷ್ಕರಣೆ ಸತ್ಯ ಮತ್ತು ಮಿಥ್ಯ ವಿಷಯ ಕುರಿತ ವಿಚಾರ ಸಂಕಿರಣವನ್ನು ನಾಳೆ ದಿನಾಂಕ 11ರ ಶನಿವಾರ ಸಂಜೆ 5.30ಕ್ಕೆ ನಗರದ ಮಾಗನೂರು ಬಸಪ್ಪ ಪಿ.ಯು. ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಂಸ್ಕಾರಯುತ ಶಿಕ್ಷಣ ಮತ್ತು ಸುಸಂಸ್ಕೃತ ಸಮಾಜ ಸೃಷ್ಠಿಸುವ ದೃಷ್ಟಿಯಿಂದ ಈ ಫೋರಂನಿಂದ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು, ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ರಾಜ್ಯದ ಗೃಹ ಸಚಿವ ಆರಗ ಜ್ಞಾನೇಂದ್ರ, ಸಾಮಾಜಿಕ ಕಾರ್ಯಕರ್ತ ವಿನಯ ಬಿದ್ರೆ ಭಾಗವಹಿಸುವರು. ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿರುವ ಸತ್ಯ, ಮಿಥ್ಯವನ್ನು ತೆರೆದಿಡುವ ಉದ್ದೇಶವಾಗಿದೆ. ವಿಚಾರ ಸಂಕಿರಣದ ನಂತರ ಸಂವಾದ ನಡೆಯಲಿದೆ ಎಂದು ಫೋರಂನ ಸದಸ್ಯ ಬಿ.ಕೆ. ತಿಪ್ಪೇಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೋರಂ ಸದಸ್ಯರಾದ ಪ್ರಸಾದ್ ಬಂಗೇರ, ಮೇಘರಾಜ್, ಶ್ರೀನಿವಾಸ್, ವಿ. ಶಂಭುಲಿಂಗಪ್ಪ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಹದೇವಿಪುರ, 6, 7ನೇ ಮೈಲಿಗಲ್ಲು, ಪಾಮೇನಹಳ್ಳಿ, ಬೆಳವನೂರು, ತುರ್ಚಘಟ್ಟ, ನಾಗನೂರು, ಬಿಸಲೇರಿ, ಶಾಮನೂರು, ಜೆ.ಹೆಚ್. ಪಟೇಲ್ ಬಡಾವಣೆ, ಜರಿಕಟ್ಟೆ, ಮುದಹದಡಿ, ಕುಂದವಾಡ, ಶಿರಮಗೊಂಡನಹಳ್ಳಿ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಲ್ಕುಂದ : ಸರ್ಕಾರಿ ಶಾಲೆಯ ನೂತನ ಕೊಠಡಿಗಳ ಉದ್ಘಾಟನೆ ಇಂದು

ದಾವಣಗೆರೆ, ಜೂ.10- ಸುನಂದಮ್ಮ ದಿ. ಓಬೇನಹಳ್ಳಿ ಶಿವಲಿಂಗಪ್ಪನವರ ಸವಿನೆನಪಿಗಾಗಿ ಬಿ. ಎಸ್. ಕವಿತಾ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರಾದ ಓ.ಎಸ್. ದಯಾನಂದ ಅವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದಾನವಾಗಿ ಕಟ್ಟಿಸಿಕೊಟ್ಟಿರುವ ನೂತನ ನಾಲ್ಕು ಶಾಲಾ ಕೊಠಡಿಗಳ ಉದ್ಘಾಟನಾ ಸಮಾರಂಭವು ನಾಳೆ ದಿನಾಂಕ 11ರ ಶನಿವಾರ ಬೆಳಗ್ಗೆ 10.35ಕ್ಕೆ ನಲ್ಕುಂದ ಗ್ರಾಮದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಕ್ಷರ ದಾಸೋಹ ಕೊಠಡಿಗೆ ಭೂಮಿ ಪೂಜೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ನೆರವೇರಿಸುವರು. ಶಾಸಕ ಪ್ರೊ. ಎನ್. ಲಿಂಗಣ್ಣ ಅಧ್ಯಕ್ಷತೆ ವಹಿಸುವರು. ಕೃಷಿ ಸಚಿವ ಬಿ.ಸಿ. ಪಾಟೀಲ್, ಶಾಸಕ ಎಸ್.ಎ. ರವೀಂದ್ರನಾಥ್ ನೂತನ ಕೊಠಡಿಗಳನ್ನು ಉದ್ಘಾಟಿಸುವರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸ್ಮಾರ್ಟ್ ಕ್ಲಾಸ್ ಉದ್ಘಾಟಿಸುವರು ಎಂದು ತಾಲ್ಲೂಕು ಪಂಚಾಯತ್ ಕೆಡಿಪಿ ಸದಸ್ಯ ಪ್ಯಾಟಿ ಹನುಮಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ಮತ್ತು ಬ್ಯಾಗ್ ವಿತರಿಸುವರು. ಬಯಲು ಸೀಮೆ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಮಾಜಿ ಶಾಸಕರಾದ ಬಸವರಾಜ್ ನಾಯ್ಕ್, ಹೆಚ್.ಪಿ. ರಾಜೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಮೀಲಾ ಬಾನು ಸಮೀವುಲ್ಲಾ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ, ಡಯಟ್ ಉಪನಿರ್ದೇಶಕ ಹೆಚ್.ಕೆ. ಲಿಂಗರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ನಿರಂಜನಮೂರ್ತಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಶಾಲೆಯ ಹಿರಿಯ ವಿದ್ಯಾರ್ಥಿ, ಊರಿನ ಪ್ರಮುಖರಾದ ಓ.ಎಸ್. ಧನ್ಯಕುಮಾರ್, ಎನ್.ಟಿ. ವೀರಪ್ಪ, ಗ್ರಾಮ ಪಂಚಾಯತ್ ಸದಸ್ಯರುಗಳಾದ ಅಜ್ಜಯ್ಯ, ಕೆ. ರಂಗಸ್ವಾಮಿ, ಕೆ. ಓಂಕಾರಪ್ಪ, ಯು.ಆರ್. ಸಾವಿತ್ರಮ್ಮ ಕರಿಬಸಪ್ಪ, ಶಿವಲಿಂಗಪ್ಪ, ಮಹದೇವಪ್ಪ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್‌ವ್ಯತ್ಯಯ

ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಭಾಷಾನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫಾ ನಗರ, ರಜಾಕ್ ಸರ್ಕಲ್, ಭಾಷಾನಗರ ಮುಖ್ಯರಸ್ತೆ, ಸುತ್ತಮುತ್ತ ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ್ ನಗರ, ಇಎಸ್‌ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷನಗರ ಮುಖ್ಯ ರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಎಸ್.ಟಿ.ಪಿ. ಸುತ್ತಮುತ್ತ, ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್.ಟಿ.ಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್.ಪಿ.ಎಸ್ ನಗರ 2 ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್ ಕಾಲೋನಿ ಇತರೆ ಪ್ರದೇಶಗಳು.

ಕೊಂಡಜ್ಜಿ ರಸ್ತೆ, ಎಸ್‌ಜೆಎಮ್ ನಗರ, ಸೇವಾದಳ ಕಾಲೋನಿ, ಹೊಸ ಕ್ಯಾಂಪ್, ಎಸ್‌ಎಮ್‌ಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿ.ಜೆ.ಎಮ್ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ವಿಚಾರಗೋಷ್ಠಿ - ಶಿವಶರಣರ ವಚನ ಸಂಪುಟ ತಂತ್ರಾಂಶದ ಪ್ರಾತ್ಯಕ್ಷಿಕೆ ಇಂದು

ಶ್ರೀ ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆಯ ಅಣ್ಣನ ಬಳಗದ ವತಿಯಿಂದ ಇಂದು ಮಧ್ಯಾಹ್ನ 2 ಗಂಟೆಗೆ ಮಾಗನೂರು ಬಸಪ್ಪ ಸಭಾಂಗಣದಲ್ಲಿ ವಿಚಾರಗೋಷ್ಠಿ ಮತ್ತು ಶಿವ ಶರಣರ ವಚನ ಸಂಪುಟ ತಂತ್ರಾಂಶದ ಪ್ರಾತ್ಯಕ್ಷಿಕೆ ನಡೆಯಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಎಂ.ಬಿ.ಸಂಗಮೇಶಗೌಡ್ರು ನೆರವೇರಿಸಲಿದ್ದಾರೆ. ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ.ರಂಗನಾಥ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಹೆಚ್. ವಿ. ವಾಮದೇವಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ, ಕಸಾಪ ಕಾರ್ಯದರ್ಶಿ ಬಿ. ದಿಳ್ಯಪ್ಪ, ವಲಯ ಅಧಿಕಾರಿಗಳಾದ ಎಸ್.ಆರ್.ಶಿರಗಂಬಿ, ಪುಷ್ಪ ಸಿ.ಕೆ. ಸಿದ್ದಪ್ಪ ಭಾಗವಹಿಸಲಿದ್ದಾರೆ.

ಶರಣರ ವಚನ ಸಾಹಿತ್ಯ ಎಂಬ ವಿಷಯದ ಕುರಿತು ದಾ.ತಾ. ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ ಉಪನ್ಯಾಸ ನೀಡಲಿದ್ದಾರೆ ಎಂದು ಅಣ್ಣನ ಬಳಗದ ಅಧ್ಯಕ್ಷ ಬಿ.ಎಸ್. ಮರುಳಸಿದ್ದಯ್ಯ ತಿಳಿಸಿದ್ದಾರೆ.

## ಸಿ.ಐ.ಟಿ.ಎಸ್ ತರಬೇತಿ ಕೋರ್ಸ್‌ಗೆ ಪ್ರವೇಶ

ದಾವಣಗೆರೆ, ಜೂ.10- ಐ.ಟಿ.ಐ / ಡಿಪ್ಲೋಮೋ / ಇಂಜಿನಿಯರಿಂಗ್ ಪದವಿ ಹೊಂದಿರುವ ಅರ್ಹ ಅಭ್ಯರ್ಥಿಗಳಿಗೆ 1 ವರ್ಷದ ಸಿ.ಐ.ಟಿ.ಎಸ್ ತರಬೇತಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶ ಪಡೆಯಲು ಬಯಸುವ ಅಭ್ಯರ್ಥಿಗಳನ್ನು ಅಖಿಲ ಭಾರತ ಸಾಮಾನ್ಯ ಪ್ರವೇಶ ಪರೀಕ್ಷೆ ಮುಖಾಂತರ ಆಯ್ಕೆ ಮಾಡಲಾಗುವುದು. ಅಖಿಲ ಭಾರತ ಸಾಮಾನ್ಯ ಪ್ರವೇಶ ಪರೀಕ್ಷೆ ಜುಲೈ 17 ರಂದು ನಡೆಸಲಾಗುವುದು. ಆನ್‌ಲೈನ್ ಮುಖಾಂತರ www.nimionlineadmission.in ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಕೊನೆಯ ದಿನವಾಗಿದೆ. ಐಟಿಓಟಿ ದಾವಣಗೆರೆ ಸಂಸ್ಥೆಯಲ್ಲಿ ಎಲೆಕ್ಟ್ರೀಷಿಯನ್, ಫಿಟ್ಟರ್ ಮತ್ತು ಇ.ಎಮ್ ವೃತ್ತಿಗಳಿಗೆ ಪ್ರವೇಶಾವಕಾಶವಿದೆ.

ಹೆಚ್ಚಿನ ಮಾಹಿತಿಗಾಗಿ ಐಟಿಓಟಿ, ಸರ್ಕಾರಿ ಐ.ಟಿ.ಐ ಆವರಣ ಹದಡಿ ರಸ್ತೆ ದಾವಣಗೆರೆ ದೂರವಾಣಿ 08192-260194ನ್ನು ಸಂಪರ್ಕಿಸಬಹುದೆಂದು ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಆಫ್ ಟ್ರೈನರ್‌ನ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.


**ಎಂಟನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀ ಶ್ಯಾಗಲೆ ಜಿ. ನಾಗಪ್ಪನವರು**

**ಮರಣ : 11.06.2014**

**ಸಂಸ್ಥಾಪಕ ಕಾರ್ಯದರ್ಶಿಗಳು, ಶ್ರೀ ಮಲ್ಲಿಕಾರ್ಜುನ ವಿದ್ಯಾ ಸಂಸ್ಥೆ (ರಿ.) ಶ್ಯಾಗಲೆ, ಮಾಜಿ ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳು (11.06.2022) ಕಳೆದರೂ, ನಿಮ್ಮ ನೆನಪು ಸದಾ ಹಸಿರಾಗಿದೆ. ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...

**ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಗುರಪ್ಪರ ವಂಶಸ್ಥರು, ಶ್ಯಾಗಲೆ ಹಾಗೂ ಬಂಧು-ಮಿತ್ರರು.**


### ಸೀತಾಲಕ್ಷ್ಮಿ ಕೆ.ಎಲ್. ಭಟ್ ನಿಧನ



ದಾವಣಗೆರೆ LIC ಕಾಲೋನಿ ವಾಸಿ ಶ್ರೀಮತಿ ಸೀತಾಲಕ್ಷ್ಮಿ ಕೆ ಎಲ್ ಭಟ್ (73) ಇವರು ದಿ. 9.6.2022 ರಂದು ಬೆಂಗಳೂರಿನ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ ಶ್ರೀ ಕೆ.ಲಕ್ಷ್ಮಿ ನಾರಾಯಣ ಭಟ್, ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ಉದ್ಯೋಗಿ ಹಾಗೂ ಕಾರ್ಮಿಕ ಮುಖಂಡರು, ಮೂವರು ಪುತ್ರರು ಮತ್ತು ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಮೃತರ ದೇಹವನ್ನು ದಿ.11.6.2022ರಂದು ದಾವಣಗೆರೆಯ LIC ಕಾಲೋನಿಯ ಸ್ವಗೃಹದಲ್ಲಿ ಮಧ್ಯಾಹ್ನ 12 ರಿಂದ 2 ರವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ಅಂತಿಮ ಕ್ರಿಯೆಯನ್ನು ದಾವಣಗೆರೆಯ ಗ್ಲಾಸ್ ಹೌಸ್ ಹತ್ತಿರದ ವಿದ್ಯುತ್ ಚಿತಾಗಾರದಲ್ಲಿ ಸಂಜೆ 3 ಗಂಟೆಗೆ ನೆರವೇರಿಸಲಾಗುವುದು.

### ಶ್ರೀಮತಿ ರತ್ನಮ್ಮ ನಿಧನ



ದಾವಣಗೆರೆ ದುಗ್ಗಮ್ಮನಪೇಟೆ ನಾಲ್‌ಬಂದ್ ಬೀದಿ ವಾಸಿ ಕುರುಬ ಸಮಾಜದ ಮುಖಂಡರು, ಕನಕ ಬ್ಯಾಂಕ್ ನಿರ್ದೇಶಕರಾದ ಪಿ. ಚೌಡಪ್ಪ ಇವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ (72) ಇವರು ದಿನಾಂಕ 10.06.2022ರ ಶುಕ್ರವಾರ ರಾತ್ರಿ 10.30ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.06.2022ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.


**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


## ನಾಳೆ ಎಸ್‌ಡಿಪಿಐ ಜನಾಧಿಕಾರ ಸಭೆ

ದಾವಣಗೆರೆ, ಜೂ.10- ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ನಾಡಿದ್ದು ದಿನಾಂಕ 12 ರಂದು ಮಧ್ಯಾಹ್ನ 2 ಕ್ಕೆ ನಗರದ ಮಿಲಾದ್ ಮೈದಾನದಲ್ಲಿ ವಿಭಾಗೀಯ ಮಟ್ಟದ ಬೃಹತ್ ಜನಾಧಿಕಾರ ಸಮಾವೇಶ ಏರ್ಪಡಿಸಲಾಗಿದೆ.

ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಮುಹಮ್ಮದ್ ಶಾಫಿ ಸಮಾವೇಶವರನ್ನು ನೆರವೇರಿಸುವರು. ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ಅಧ್ಯಕ್ಷತೆ ವಹಿಸುವರು. ಮುಖ್ಯ ಭಾಷಣಕಾರರಾಗಿ ಮೈಸೂರಿನ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಪಿಎಫ್‌ಐನ ರಾಷ್ಟ್ರೀಯ ಕಾರ್ಯದರ್ಶಿ ಮುಹಮ್ಮದ್ ಸಾಖಿಬ್, ಆದಿಜಾಂಬವ ಮಠದ ಶ್ರೀ ಷಡಾಕ್ಷರಿ ಮುನಿಸ್ವಾಮೀಜಿ ಭಾಗವಹಿಸವರು.

## ನಂದಗೋಕುಲ ಶಾಲೆಯಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 10 - ನಗರದ ಆರ್‌ಟಿಓ ಆಫೀಸ್ ಹಿಂಭಾಗದಲ್ಲಿರುವ ನಂದಗೋಕುಲ ಶಾಲೆಯಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಬಿ. ಅನಸೂಯ, ಮುಖ್ಯೋಪಾಧ್ಯಾಯರಾದ ರೆಹನಾ ಬಾನು ನಾಸಿಕ, ಹಿರಿಯ ಶಿಕ್ಷಕ ಆರ್. ಬಸವರಾಜು ಉಪಸ್ಥಿತರಿದ್ದರು.


**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 50/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಜಯಲಿಂಗಯ್ಯ ಮತ್ತು ಇನ್ನೊಬ್ಬರು**

2ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,38,727/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 52/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಶಾ ಇ ಆಲಂ. ಕೆ. ಮತ್ತು ಇನ್ನೊಬ್ಬರು**

3ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,46,130/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 53/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ವಿಜಯ ಕುಮಾರ್ ಜಿ.ಎಂ. ಮತ್ತು ಇನ್ನೊಬ್ಬರು**

3ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,42,647/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 54/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಮಹಮದ್ ಇಶಾಕ್ ಶೇಕ್ ಮತ್ತು ಇನ್ನೊಬ್ಬರು**

3ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,51,369/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 55/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಸಿದ್ದಯ್ಯ ಮತ್ತು ಇನ್ನೊಬ್ಬರು**

3ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,41,196/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 56/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಶ್ರೀಮತಿ ಫರೀದಾ ಬಾನು ಮತ್ತು ಇನ್ನೊಬ್ಬರು**

3ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,40,290/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 57/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಅಬ್ದುಲ್ ರೆಹಮಾನ್ ಮತ್ತು ಇನ್ನೊಬ್ಬರು**

2ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,37,308/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಕಮರ್ಷಿಯಲ್ ಓ.ಎಸ್. ಸಂಖ್ಯೆ: 58/2021**

ವಾದಿ: **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಕುಂಬಳೂರು ಶಾಖೆ, ಹರಿಹರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು: **ಸೈಯದ್ ಪರ್ವೆಜ್ ಮತ್ತು ಇನ್ನೊಬ್ಬರು**

2ನೇ ಪ್ರತಿವಾದಿ : **ಶ್ರೀಮತಿ ಶಾಹಂಗೀರ್ ಎ.ಖದ್ದೂಸ್ ಕೋಂ ಸೈಯದ್ ಅಲ್ತಾಫ್ ಅಹ್ಮದ್** ವಯಸ್ಸು: ಸುಮಾರು 38 ವರ್ಷ, ವ್ಯಾಪಾರಿ, ವಾಸ: ಎಸ್.ಕೆ. ರೈಸ್ ಮಿಲ್ ಮಲೇಬೆನ್ನೂರು ಟೌನ್, ಹರಿಹರ ತಾಲ್ಲೂಕು.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿ ಬ್ಯಾಂಕ್‌ನವರು ಪ್ರತಿವಾದಿಯರ ವಿರುದ್ಧ ದಾವೆಯ ಮೊತ್ತ ರೂ.11,44,389/- ಮತ್ತು ವಾರ್ಷಿಕ ಶೇಕಡ 14% ಬಡ್ಡಿ ವಸೂಲಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ಕಮರ್ಷಿಯಲ್ ಕೋರ್ಟ್ ಆಕ್ಟ್ ಅಡಿಯಲ್ಲಿ ದಾವೆ ಸಲ್ಲಿಸಿದ್ದು, 2ನೇ ಪ್ರತಿವಾದಿಯಾದ ನೀವು ನ್ಯಾಯಾಲಯದಿಂದ ಹೊರಡಿಸಲಾಗಿರುವ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸದೆ ಹಿಂದಿರುಗಿಸಿರುವ ಪ್ರಯುಕ್ತ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸನ್ನು ಹೊರಡಿಸುತ್ತಿದ್ದು, ನೀವು ದಿನಾಂಕ: 18.07.2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯಕ್ಕೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 10.06.2022 ರಂದು ಹೊರಡಿಸಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ವಾದಿಯ ಪರ ವಕೀಲರು (ಹೆಚ್.ವಿ. ರಾಮದಾಸ್)

(ಬಿ. ಶ್ರೀನಿವಾಸ್) , ಮುಖ್ಯ ಆಡಳಿತಾಧಿಕಾರಿಗಳು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

# ತಪ್ಪು ದಾರಿಗೆಳೆಯುವ ಜಾಹೀರಾತುಗಳಿಗೆ ಕಡಿವಾಣ

## ಹೊಸ ಮಾರ್ಗಸೂಚಿಯಲ್ಲಿ ಮಕ್ಕಳ ರಕ್ಷಣೆಗೆ ಒತ್ತು

ನವದೆಹಲಿ, ಜೂ. 10 - ಗ್ರಾಹಕರಿಗೆ ಅದರಲ್ಲೂ ಮಕ್ಕಳಿಗೆ ಆಮಿಷ ಒಡ್ಡುವ, ತಪ್ಪು ದಾರಿಗೆ ಎಳೆಯುವ ಜಾಹೀರಾತುಗಳಿಗೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸುವ ಹೊಸ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

ತಕ್ಷಣದಿಂದಲೇ ಜಾರಿಗೆ ಬರುವಂತೆ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿದೆ. ಉಚಿತ ಕೊಡುಗೆ ಹಾಗೂ ವಿನಾಯಿತಿಗಳ ಹೆಸರಿನಲ್ಲಿ ಗ್ರಾಹಕರಿಗೆ ವಂಚನೆ ಮಾಡುವುದನ್ನು ತಡೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ಗ್ರಾಹಕ ವ್ಯವಹಾರಗಳ ಸಚಿವಾಲಯವು ಹೊಸ ಮಾರ್ಗಸೂಚಿ ಪ್ರಕಟಿಸಿದೆ. ಮಾರ್ಗಸೂಚಿ ಉಲ್ಲಂಘಿಸುವವರ ವಿರುದ್ಧ ಗ್ರಾಹಕ ರಕ್ಷಣಾ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು. ಮೊದಲ ಬಾರಿ ತಪ್ಪು ಮಾಡಿದವರಿಗೆ 10 ಲಕ್ಷ ರೂ. ಹಾಗೂ ನಂತರದ ತಪ್ಪುಗಳಿಗೆ 50 ಲಕ್ಷ ರೂ.ಗಳವರೆಗೆ ದಂಡ ವಿಧಿಸಲಾಗುವುದು.

ಈ ಬಗ್ಗೆ ವಿವರ ನೀಡಿರುವ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್, ಗ್ರಾಹಕರ ಹಿತರಕ್ಷಣೆ ಕುರಿತು ಉದ್ಯಮದಲ್ಲಿ ಹೆಚ್ಚಿನ ಅರಿವು ಮೂಡಿಸಲು ಮಾರ್ಗಸೂಚಿ ಪ್ರಕಟಿಸಲಾಗಿದೆ. ಮುದ್ರಣ, ಟಿವಿ ಹಾಗೂ ಆನ್‌ಲೈನ್ ಸೇರಿದಂತೆ ಎಲ್ಲ ವೇದಿಕೆಗಳಿಗೆ ಹೊಸ ಮಾರ್ಗಸೂಚಿ ಅನ್ವಯವಾಗಲಿದೆ.

ಗ್ರಾಹಕ ಸೇವೆಗಳನ್ನು ಒದಗಿಸುವಲ್ಲಿ ತೊಡಗಿರುವ ಸಾರ್ವಜನಿಕ ವಲಯದ ಘಟಕಗಳು ನೀಡುವ ಸರ್ಕಾರಿ ಜಾಹೀರಾತುಗಳಿಗೂ ಈ ಮಾರ್ಗಸೂಚಿಗಳು ಅನ್ವಯಿಸುತ್ತವೆ. ಮಕ್ಕಳಲ್ಲಿ ಅವಾಸ್ತವಿಕ ನಂಬಿಕೆ ಹುಟ್ಟಿಸುವಂತೆ ಉತ್ಪನ್ನಗಳ ಪ್ರಚಾರ ಮಾಡುವುದಕ್ಕೂ ತಡೆ ಹಾಕಲಾಗಿದೆ. ಮಕ್ಕಳ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಮಾನ್ಯತೆ ಪಡೆದ ಸಂಸ್ಥೆಗಳಿಂದ ವೈಜ್ಞಾನಿಕವಾಗಿ ಖಾತರಿಗೊಳಿಸಿದ ವಿಷಯಗಳನ್ನು ಮಾತ್ರ ತಿಳಿಸಬೇಕಿದೆ.

# ನಗರದಲ್ಲಿ ಇಂದು ಕ್ರೀಡಾಕೂಟ

ಸಂತ ಪೌಲರ ವಿದ್ಯಾಸಂಸ್ಥೆಯ ಅಮೃತ ಮಹೋತ್ಸವದ ಅಂಗವಾಗಿ ಶಾಲೆಯಲ್ಲಿ ನರ್ಸರಿಯಿಂದ ಹತ್ತನೇ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿರುವ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ.

ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಮಾಜಿ ಶಾಸಕ ಬಿ.ಪಿ. ಹರೀಶ್, ಜೆ.ಜೆ.ಎಮ್ ದಂತ ವೈದ್ಯಾಲಯದ ಪ್ರೊ. ಡಾ. ಐನಳ್ಳಿ ಮಹಾರುದ್ರಪ್ರಸಾದ್ ಕ್ರೀಡೋತ್ಸವವನ್ನು ಉದ್ಘಾಟಿಸಲಿದ್ದಾರೆ.

# ಹೊನ್ನಾಳಿಗೆ ಇಂದು ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ

ಹೀರೇಕಲ್ಮಠದಲ್ಲಿ ಇಂದು ರೈತ ಹುತಾತ್ಮ ದಿನಾಚರಣೆ ನಡೆಯಲಿದೆ ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಉಪಾಧ್ಯಕ್ಷ ದೊಡ್ಡೆರಹಳ್ಳಿ ನಾಗರಾಜಪ್ಪ ತಿಳಿಸಿದ್ದಾರೆ. ರೈತರ ಹುತಾತ್ಮ ದಿನಾಚರಣೆಯಲ್ಲಿ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ, ಡಿ.ಸಿ ಮಾಹಂತೇಶ್ ಬೀಳಗಿ, ಎಸಿ ಹುಲ್ಲುಮನಿ ತಿಮ್ಮಣ್ಣ ತಹಶೀಲ್ದಾರ್ ರಶ್ಮಿ ಹೊನ್ನಾಳಿ ಚನ್ನಮಲ್ಲಿಕಾರ್ಜುನ್ ಸ್ವಾಮೀಜಿ ರೈತಸಂಘದ ಅಧ್ಯಕ್ಷ ಬಸಪ್ಪ ಸೇರಿದಂತೆ ಅಖಂಡ ಕರ್ನಾಟಕ ರೈತ ಸಂಘದ ಮುಖಂಡರು ಭಾಗವಹಿಸಲಿದ್ದಾರೆ.

# ಮೋದಿ ಮಾನವೀಯತೆ ಮೆರೆದ ಪುಣ್ಯಾತ್ಮ

## ಕೇಂದ್ರ ಸರ್ಕಾರದ 8 ವರ್ಷಗಳ ಸಾಧನೆಯನ್ನು ಕೊಂಡಾಡಿದ ಸಂಸದ ಜಿ.ಎಂ.ಸಿದ್ದೇಶ್ವರ



ದಾವಣಗೆರೆ, ಜೂ. 10- ಯುವ ಮೋರ್ಚಾ ಭಾರತೀಯ ಜನತಾ ಪಾರ್ಟಿಯ ಬೆನ್ನೆಲುಬು ಮತ್ತು ಶಕ್ತಿ ಕೂಡ. ಪಕ್ಷದ ಬಲವರ್ಧನೆಯಲ್ಲಿ ಯುವ ಮೋರ್ಚಾ ಪಾತ್ರ ಅತ್ಯಂತ ಪ್ರಮುಖವಾದುದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಏರ್ಪಾಡಾಗಿದ್ದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 8 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಚ್ಛ, ಭ್ರಷ್ಟಾಚಾರ ರಹಿತ ಆಡಳಿತ ನಡೆಸುವ ಮೂಲಕ ವಿಶ್ವಮಾನವರಾಗಿ ಗುರುತಿಸಿಕೊಂಡಿದ್ದಾರೆ. ಅವರ ಸಾಧನೆಗಳು, ಉಪಯುಕ್ತ ಯೋಜನೆಗಳನ್ನು ಸಮಾಜದ ಕಟ್ಟ ಕಡೆಯ ಜನರಿಗೂ ತಲುಪಿಸುವ ಕೆಲಸವನ್ನು ಎಲ್ಲಾ ಯುವ ಮೋರ್ಚಾ ಘಟಕಗಳ ಕಾರ್ಯಕರ್ತರು ಮಾಡಬೇಕಾಗಿದೆ ಎಂದರು.

ಭಾರತದಲ್ಲಿ ಕೋವಿಡ್ ಸೋಂಕನ್ನು ಸಮರ್ಥವಾಗಿ ನಿಭಾಯಿಸಿದ ಕೀರ್ತಿ ಮೋದಿಯವರದು. 200 ಕೋಟಿ ವ್ಯಾಕ್ಸಿನ್ ಉಚಿತ ನೀಡಿದ್ದಲ್ಲದೇ 180 ದೇಶಗಳಿಗೆ ವ್ಯಾಕ್ಸಿನ್ ಕಳುಹಿಸಿ ಮಾನವೀಯತೆ ಮೆರೆದ ಪುಣ್ಯಾತ್ಮ ಎಂದು ಮೋದಿಯವರ ಸಮಾಜ ಸೇವೆಯನ್ನು ಅವರು ಕೊಂಡಾಡಿದರು.

ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ, ಸುಕನ್ಯಾ ಸಮೃದ್ಧಿ ಯೋಜನೆ, ಪ್ರಧಾನಮಂತ್ರಿ ಸುರಕ್ಷಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಪ್ರಧಾನ ಮಂತ್ರಿ ಮುದ್ರಾ ಯೋಜನೆ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಸೇರಿದಂತೆ ಅನೇಕ ಜನೋಪಯೋಗಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಮೋದಿಯವರು ಯಶಸ್ವಿಯಾಗಿದ್ದಾರೆ ಎಂದರು.

ಅದರಂತೆ ಹಿಂದೆ ಆಡಳಿತ ನಡೆಸಿದ ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಹಾಲಿ ಸಿಎಂ ಬಸವರಾಜ ಬೊಮ್ಮಾಯಿ ಕೂಡ ರಾಜ್ಯದಲ್ಲಿ ವಿದ್ಯಾಸಿರಿ, ಪೆನ್ಷನ್ ಯೋಜನೆ, ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಿದ್ದಾರೆ ಎಂದು ಮಾಹಿತಿ ನೀಡಿದರು.

ದೇಶದಲ್ಲಿ 64 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷದವರು ಯಾವುದೇ ಅಭಿವೃದ್ಧಿ ಮಾಡಲಿಲ್ಲ. ಆದರೆ ಮೋದಿಯವರು ಅಧಿಕಾರಕ್ಕೆ ಬಂದು 8 ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಕಾಂಗ್ರೆಸ್‌ನವರು 'ಗರೀಬಿ ಹಠಾವೋ' ಎಂದು ಹೇಳುತ್ತಾರೆ. ಆದರೆ ಇಂದಿರಾ ಆವಾಸ್, ಉಚಿತ ಪಡಿತರ ವಿತರಣೆ ಏಕೆ ಮಾಡಬೇಕಾಗಿತ್ತು ಎಂದು ಪ್ರಶ್ನಿಸಿದರು.

ಬಿಜೆಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷ ಡಾ. ಕೆ.ಸಿ. ಸಂದೀಪ್ ಕುಮಾರ್ ಮಾತನಾಡಿ, ಜನಪರ ಹೋರಾಟ, ಪ್ರತಿಭಟನೆಗಳು ಮತ್ತು ಜನರ ಸಂಕಷ್ಟಗಳಿಗೆ ಸ್ಪಂದಿಸಿ ಅವರ ಪರ ಧ್ವನಿಯಾಗಿ ನಿಲ್ಲುವ ಯುವ ಘಟಕಗಳ ಕಾರ್ಯ ಶ್ಲಾಘನೀಯ ಎಂದರು.

ತತ್ವ ಸಿದ್ಧಾಂತಗಳನ್ನು ಹೊಂದಿದ ಪಕ್ಷ ಬಿಜೆಪಿ. ರಾಷ್ಟ್ರನಿರ್ಮಾಣ, ರಾಷ್ಟ್ರೀಯತೆ, ದೇಶದ ಐಕ್ಯತೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರು ಪಕ್ಷವಾಗಿದೆ. ಬಿಜೆಪಿ ಕಾರ್ಯಕರ್ತರ ಪಕ್ಷವಾಗಿದೆ. ಅವರ ಕಾರ್ಯಕ್ಷಮತೆ ಗುರುತಿಸಿ ಸೂಕ್ತ ಸ್ಥಾನ ಮಾನ ಕಲ್ಪಿಸುವ ಪಕ್ಷ ಬಿಜೆಪಿ ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಅತ್ಯಂತ ಶಿಸ್ತು ಬದ್ಧ ಪಾರ್ಟಿ ಬಿಜೆಪಿ. ವಿಕೇಂದ್ರೀಕರಣ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಜೊತೆಗೆ ಜನಪರ ಯೋಜನೆಗಳನ್ನು ರೂಪಿಸಿದೆ. ಯುವ ಮೋರ್ಚಾ ದೇಶದ ಭವಿಷ್ಯ ಎಂದು ಹೇಳಿದರು.

ಮಹಾನಗರ ಪಾಲಿಕೆ ಸದಸ್ಯರೂ, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಎಸ್.ಜಗದೀಶ್, ಮೇಯರ್ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ಗಾಯತ್ರಿ ಖಂಡೋಜಿರಾವ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ವಿಜೇಂದ್ರ, ಅಡವಿಸ್ವಾಮಿ, ನೇತ್ರಾ ಮತ್ತು ಜಗದೀಶ್ ವಂದೇ ಮಾತರಂ ಗೀತೆ ಹಾಡಿದರು. ಯಲ್ಲೇಶ್ ಸ್ವಾಗತಿಸಿದರು. ಶ್ರೀಧರ್ ಹಾಲುವರ್ತಿ ನಿರೂಪಿಸಿದರು. ಕೆ. ಬಿ. ನರೇಂದ್ರ ವಂದಿಸಿದರು.

# ಖಾಸಗೀಕರಣ ಮಾಡುತ್ತಿಲ್ಲ

